ವಿದ್ಯಾಭ್ಯಾಸದ ಇಲಾಖೆ.

———

ಮೈಸೂರು ದೇಶೀಯ ಪರೀಕ್ಷೆಗಳು.

ಸ್ಯ 1896ನೇ ಇಸವಿ ಅಕ್ಟೋಬರ್ ತಾರೀಖು 19.

ಪ್ರಕಟನ ಪತ್ರಿಕೆ.

ಮೈಸೂರು ದೇಶೀಯ ಪರೀಕ್ಷೆಗಳು ಸ್ಯ 1896ನೇ ಇಸವಿ ಡಿಸೆಂಬರ್ ತಿಂಗಳು ಮೊದಲನೇ ತಾರೀಖಿನಿಂದ ಆರಂಭವಾಗಿ ಪ್ರತಿ ಡಿಸ್ಟ್ರಿಕ್ಟಿನ ಮುಖ್ಯಸ್ಥಳ (Head-quarters) ದಲ್ಲಿಯೂ ಮತ್ತು ಚಿಕ್ಕಬಳ್ಳಾಪುರದಲ್ಲಿಯೂ, ಚನ್ನಪಟ್ಟಣದಲ್ಲಿಯೂ ನಡೆಯಿಸಲ್ಪಡುವವು:—

ಪರೀಕ್ಷೆಗಳು ಇದರಡೀಕಂಡ ಕಾಲ ಮತ್ತು ವಿಷಯಗಳ ಕ್ರಮಗಳನ್ನನುಸರಿಸಿ ನಡೆಯಿಸಲ್ಪಡುವವು:—

ಮೈಸೂರು ಲೋವರ್ ಸೆಕಂಡರಿ ಪರೀಕ್ಷೆ.

ದಿವಸ.	ಕಾಲ.	ವಿಷಯಗಳು.	ಅಂಕಗಳು.
ಮೊದಲನೇ ದಿವಸ	10ರಿಂದ 12—30 ವರೆಗೆ	ಪ್ರಥಮ ಅಥವಾ ಆವಶ್ಯಕಭಾಷೆ— ಇಂಗ್ಲಿಷ್ ವ್ಯಾಕರಣ ಮತ್ತು ಭಾಷಾಗ್ರಂಥ; ಸಂಸ್ಕೃತದ ಮತ್ತು ಫಾರಸಿಯ ವ್ಯಾಕರಣ ಮತ್ತು ಭಾಷಾ ಗ್ರಂಥಗಳು	65
	1–30ರಿಂದ 2—30 ವರೆಗೆ	ಪ್ರಥಮ ಅಥವಾ ಆವಶ್ಯಕಭಾಷೆ— ಭಾಷಾಂತರೀಕರಣ.—ಇಂಗ್ಲಿಷ್, ಸಂಸ್ಕೃತ; ಫಾರಸಿ .. ಇಂಗ್ಲಿಷ್ ಪ್ರಬಂಧರಚನೆ, ಇಂಗ್ಲೀಷನ್ನು ದೇಶಭಾಷೆಯಾಗಿ ಉಳ್ಳವರಿಗೆ	35
	2–35ರಿಂದ 3–5 ವರೆಗೆ	ಪ್ರಥಮ ಅಥವಾ ಆವಶ್ಯಕಭಾಷೆ— ಉಕ್ತಲೇಖನ—ಇಂಗ್ಲಿಷ್; ಸಂಸ್ಕೃತ; ಫಾರಸಿ	10
	3–10ರಿಂದ 3—40 ವರೆಗೆ	ಪ್ರಥಮ ಅಥವಾ ಆವಶ್ಯಕಭಾಷೆ— ಕೈ ಬರೆವಣಿಗೆ.—ಇಂಗ್ಲಿಷ್; ಸಂಸ್ಕೃತ; ಫಾರಸಿ	10
	3–45ರಿಂದ 4—15 ವರೆಗೆ	ಹಿಂದುಸ್ತಾನಿ ಉಕ್ತಲೇಖನ	10
	4–20ರಿಂದ 4—50 ವರೆಗೆ	ಹಿಂದುಸ್ತಾನಿ ಕೈ ಬರೆವಣಿಗೆ	10
ಎರಡನೇ ದಿವಸ	10ರಿಂದ 1ರ ವರೆಗೆ	ಕನ್ನಡ ಪ್ರಥಮ ಅಥವಾ ದ್ವಿತೀಯ ಭಾಷೆ— ಕನ್ನಡ ವ್ಯಾಕರಣ, ಭಾಷಾಗ್ರಂಥ ಮತ್ತು ಪ್ರಬಂಧರಚನೆ ..	100
		ಫಾರಸಿ ದ್ವಿತೀಯ ಭಾಷೆ— ಫಾರಸಿ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ..	100
	2ರಿಂದ 5 ವರೆಗೆ	ಸಂಸ್ಕೃತ ದ್ವಿತೀಯ ಭಾಷೆ— ಸಂಸ್ಕೃತ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ..	100
		ಲಾರ್ಟ್ ದ್ವಿತೀಯಭಾಷೆ— ಲಾರ್ಟ್ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ..	120
		ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ— ತೆಲುಗು, ತಮಿಳು ಮತ್ತು ಹಿಂದುಸ್ತಾನಿ, ವ್ಯಾಕರಣ, ಭಾಷಾಗ್ರಂಥಗಳು ಮತ್ತು ಪ್ರಬಂಧರಚನೆ	100

ದಿವಸ.	ಕಾಲ.	ವಿಷಯಗಳು.	ಅಂಕಗಳು.
ಮೂರನೇ ದಿವಸ	10ರಿಂದ 12 ವರೆಗೆ.	ಅಂಕಗಣಿತ	100
	12–5ರಿಂದ 12–35 ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ— ಕನ್ನಡ, ತೆಲುಗು ಮತ್ತು ತಮಿಳು ಅಕ್ಷರ ಸಂಯೋಜನ ...	10
	12–40ರಿಂದ 1—10 ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ—ಕನ್ನಡ, ತೆಲುಗು ಮತ್ತು ತಮಿಳು ಕೈ ಬರೆವಣಿಗೆ	10
	2ರಿಂದ 4 ವರೆಗೆ	ರೇಖಾಗಣಿತ ಬೀಜಗಣಿತಗಳು	100
	4–5ರಿಂದ 4—35 ವರೆಗೆ	ಐಚ್ಛಿಕ ದ್ವಿತೀಯ ಭಾಷೆ— ಸಂಸ್ಕೃತ ಮತ್ತು ಫಾರಸಿ ಅಕ್ಷರ ಸಂಯೋಜನ	10
	4–40ರಿಂದ 5—10 ವರೆಗೆ	ಐಚ್ಛಿಕ ದ್ವಿತೀಯ ಭಾಷೆ— ಸಂಸ್ಕೃತ ಮತ್ತು ಫಾರಸಿ ಕೈ ಬರೆವಣಿಗೆ . ..	10
ನಾಲ್ಕನೇ ದಿವಸ	10ರಿಂದ 1 ವರೆಗೆ	ಚರಿತ್ರೆ, ಭೂಗೋಳ ಶಾಸ್ತ್ರ ಮತ್ತು ಭೂಪಟ ಬರೆಯುವುದು ..	120
	2ರಿಂದ 3–30 ವರೆಗೆ	ವ್ಯವಸಾಯ ಶಾಸ್ತ್ರ	100
	3—35ರಿಂದ 5—5 ವರೆಗೆ	ಆರೋಗ್ಯ ಶಾಸ್ತ್ರ	100
ಐದನೇ ದಿವಸ	10ರಿಂದ 11—30 ವರೆಗೆ	ಕ್ಷೇತ್ರಗಣಿತ	100
	11–35ರಿಂದ 1—5 ವರೆಗೆ	ಪ್ರಾಕೃತಿಕ ಭೂಗೋಳ ಶಾಸ್ತ್ರ	100
	2ರಿಂದ 3–30 ವರೆಗೆ	ಹೊಲಿಗೆ	50
	3—35ರಿಂದ 5—5 ವರೆಗೆ	ಪಾಕಶಾಸ್ತ್ರ	50

ಮೈಸೂರು ದೇಶಭಾಷೆಯ ಅಪ್ಪರ್ ಸೆಕಂಡರಿ ಪರೀಕ್ಷೆ.

ದಿನ.	ಘಂಟೆ.	ವಿಷಯ.	ಅಂಕಗಳು.
ಮೊದಲನೇ ದಿನ	10—1	ಪ್ರಥಮ ಭಾಷೆ ಗ್ರಂಥಗಳು	60 } 130
	2—4	ಅದೇ ಪ್ರಾಥವ್ಯಾಕರಣ	40 }
	4·5—5·5	ಅದೇ ಪ್ರಬಂಧರಚನೆ	30 }
ಎರಡನೇ ದಿನ	10—1	ದ್ವಿತೀಯ ಭಾಷೆ ಗ್ರಂಥಗಳು, ವ್ಯಾಕರಣ, ಪದವಿನ್ಯಾಸ, ಭಾಷಾ ಶೈಲಿ	50 } 100
	2—5	ಭಾಷಾಂತರೀಕರಣ	50 }
ಮೂರನೇ ದಿನ	10—12	ರೇಖಾಗಣಿತ, ಕ್ಷೇತ್ರಗಣಿತ	40 } 120
	1—3·30	ಅಂಕಗಣಿತ	50 }
	3·35—5·5	ಬೀಜಗಣಿತ	30 }
ನಾಲ್ಕನೇ ದಿನ	10—12	ಪ್ರಾಕೃತಿಕಶಾಸ್ತ್ರ (Physical science)	40 } 120
	1—3	ಆರೋಗ್ಯಶಾಸ್ತ್ರ	40 }
	3·5—5·5	ಕೃಷಿಶಾಸ್ತ್ರ	40 }
ಐದನೇ ದಿನ	10—1	ಚರಿತ್ರೆ	50 } 100
	2—5	ಭೂಗೋಳಶಾಸ್ತ್ರ	50 }
			ಜುಮ್ಲಾ 570

ಪರೀಕ್ಷೆಯರಿಗೆ ಹೊಲಿಗೆಯಲ್ಲಿಯೂ ಸಂಗೀತದಲ್ಲಿಯೂ ಪರೀಕ್ಷೆಯು ಆರನೇ ದಿನ ತತ್ಪೂರ್ವ ಪ್ರಕಟಿಸಲ್ಪಡುವ ಸ್ಥಳ, ಕಾಲಗಳಲ್ಲಿ ನಡೆಯುವುದು.

ಕರ್ನಾಟಕ ಪಂಡಿತಪರೀಕ್ಷೆ.

ದಿನ.	ಘಂಟೆ.	ವಿಷಯ.	ಅಂಕಗಳು.	
ಮೊದಲನೇ ದಿನ ..	10—1	ಕನ್ನಡ ವ್ಯಾಕರಣ	120	200
	2—5	ಕನ್ನಡ ಛಂದಸ್ಸು ಮತ್ತು ಅಲಂಕಾರ	80	
ಎರಡನೇ ದಿನ ..	10—1	ಕನ್ನಡ ಗ್ರಂಥಗಳು ಮೊದಲನೇಪತ್ರಿಕೆ	100	400
	2—5	ಅದೇ ಎರಡನೇ ಪತ್ರಿಕೆ	100	
ಮೂರನೇ ದಿನ ...	10—1	ಅದೇ ಮೂರನೇ ಪತ್ರಿಕೆ	100	
	2—5	ಅದೇ ನಾಲ್ಕನೇ ಪತ್ರಿಕೆ	100	
ನಾಲ್ಕನೇ ದಿನ ..	10—1	ಕನ್ನಡ ಪ್ರಬಂಧರಚನೆ	100	
	2—5	ಭಾಷಾಂತರೀಕರಣ	100	
ಐದನೇ ದಿನ ..	10—1	ಸಂಸ್ಕೃತ ವ್ಯಾಕರಣ	80	200
	2—5	ಸಂಸ್ಕೃತ ಛಂದಸ್ಸು ಮತ್ತು ಅಲಂಕಾರ	120	
ಆರನೇ ದಿನ ..	10—1	ಸಂಸ್ಕೃತ ಗ್ರಂಥಗಳು ಮೊದಲನೇ ಪತ್ರಿಕೆ	100	200
	2—5	ಅದೇ ಎರಡನೇ ಪತ್ರಿಕೆ	100	

ಇದರಿಂದ ಕಂಡ ನಿಬಂಧನೆಗಳಿಗೆ ವಿದ್ಯಾರ್ಥಿಗಳು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು.

(1) ಪರೀಕ್ಷೆಯು ಆರಂಭಿಸುವದಕ್ಕೆ ಕ್ಲಿಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವ ವರೆಗೂ ಪರೀಕ್ಷಾ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ವಿದ್ಯಾರ್ಥಿಗೂ ಅಪ್ಪಣೆ ಕೊಡಲ್ಪಡುವದಿಲ್ಲವು. ಮತ್ತು ಆಂಥಾ ಅರ್ಧಘಂಟೆ ಕಳೆದಮೇಲೆ ಒರುವ ಯಾವ ವಿದ್ಯಾರ್ಥಿಗಳಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

(2) ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷಾ ಕೊಠಡಿಯನ್ನು ಬಂದಾವರ್ತಿ ಬಿಟ್ಟು ಬಂದ ನಂತರ ಪುನಃ ಪ್ರವೇಸಿಸಲು ಯಾವ ವಿದ್ಯಾರ್ಥಿಗೂ ಅವಕಾಶ ಉಂಟಾಗಲಾರದು. ಅಲ್ಲದೆ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟ ವಿನಹ ಪರೀಕ್ಷಾ ಸ್ಥಳವನ್ನು ಬಿಟ್ಟು ಬರುವುದಕ್ಕೆ ಸಹ ಅವಕಾಶ ಕೊಡುವದಿಲ್ಲವು.

(3) ಯಾವ ವಿದ್ಯಾರ್ಥಿಯೇ ಆಗಲಿ ಮತ್ತೊಬ್ಬ ವಿದ್ಯಾರ್ಥಿಯೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ಯಾವ ವಿಧದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೂಡ್ಲೆ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ಸಂಗತಿಯು ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವುದು.

(4) ಪರೀಕ್ಷಾ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲರುಗಳನ್ನಾಗಲಿ, ಪುಸ್ತುಕಗಳನ್ನಾಗಲಿ, ಬರದ ಕಾಗದಗಳನ್ನಾಗಲಿ, ಅಥವಾ ಇನ್ಯಾವ ವಿಧವಾದ ಕಾಗದ ಪತ್ರಗಳನ್ನಾಗಲಿ, ತೆಗೆದುಕೊಂಡು ಹೋಗಲು ಯಾವ ವಿದ್ಯಾರ್ಥಿಗಳಿಗೂ ಯಾವ ಸಂದರ್ಭದಲ್ಲಿಯೂ ಅವಕಾಶ ಕೊಡಲ್ಪಡುವದಿಲ್ಲವು. ಯಾವ ವಿದ್ಯಾರ್ಥಿಯಾಗಲಿ, ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವದಾಗಿಯಾಗಲಿ, ಅಥವಾ ಇನ್ಯಾವ ಅಕೃತ್ಯಗಳನ್ನು ನಡಿಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ನಡವಳಿತವು ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವದು.

(5) ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರ್ನಿಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವ ವರಿಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡೆಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ವಿದ್ಯಾರ್ಥಿಯ ಹೆಸರು ರಿಜಿಸ್ಟರ್ ನಂಬರ್ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡುವದಿಲ್ಲವು.

(8) ವಿದ್ಯಾರ್ಥಿಗಳು ಕಾಗದಗಳನ್ನು ಹರಿಯದಂತೆಯೂ ಮತ್ತು ನೆಲದಮೇಲೆ ಕಾಗದಗಳನ್ನು ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. ಕೆಟ್ಟುಹೋದ ವಿಸಿಪ್ಪು ಕಾಗದಗಳೂ ವಿದ್ಯಾರ್ಥಿಯು ಬರೆಯುತ್ತಲಿದ್ದ ಮೇಜಿನಮೇಲೆಯೇ ಬಿಡಲ್ಪಡಬೇಕು.

ಎಚ್. ಜೆ. ಭಾಭಾ,
ಇನ್ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.